# ಕರ್ನಾಟಕ ವಿಧಾನ ಪರಿಷತ್ತು

01. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2560

02. ಸದಸ್ಯರ ಹೆಸರು : ಶ್ರೀ ಅಡಗೂರು ಹೆಚ್.ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು)

03. ಉತ್ತರಿಸುವ ದಿನಾಂಕ : 24.03.2022

04. ಉತ್ತರಿಸುವ ಸಚಿವರು : ಮಾನ್ಯ ಗೃಹ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಮಾಂಡೆಂಟ್ 1ನೇ ಪಡೆ, ಕೆ.ಎಸ್.ಆರ್.ಪಿ, ಬೆಂಗಳೂರು ಘಟಕದಲ್ಲಿ 2021–22ನೇ ಸಾಲಿನಲ್ಲಿ ಆರ್‌ಪಿಸಿ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ: 02.06.2021ರಂದು ದಾಖಲೆ ಪರಿಶೀಲನೆಗೆ ಹಾಜರಾದ ಅಭ್ಯರ್ಥಿಗಳ ಸಂಖ್ಯೆ ಎಷ್ಟು; | ಕಮಾಂಡೆಂಟ್ 1ನೇ ಪಡೆ, ಕೆ.ಎಸ್.ಆರ್.ಪಿ, ಬೆಂಗಳೂರು ಘಟಕದಲ್ಲಿ 2021–22ನೇ ಸಾಲಿನಲ್ಲಿ 230 ಆರ್.ಪಿ.ಸಿ ಹುದ್ದೆಯ ನೇಮಕಾತಿಗೆ ಸಂಬಂಧಿಸಿದಂತೆ ಕ್ರಮ ಸಂ:21ರಲ್ಲಿನ ಅಭ್ಯರ್ಥಿಗೆ ದಿನಾಂಕ:23.03.2021ರಂದು ದಾಖಲೆ ಹಾಗೂ ಪರಿಶೀಲನೆಗೆ ಹಾಜರಾಗುವಂತೆ ಕರೆ ಪತ್ರವನ್ನು ಕಳುಹಿಸಲಾಗಿದೆ.<br>ದಿನಾಂಕ:23.03.2021ರಂದು ಕ್ರಮ ಸಂಖ್ಯೆ:21ರ ಅಭ್ಯರ್ಥಿಯು ದಾಖಲೆ ಹಾಗೂ ಪರಿಶೀಲನೆಗೆ ಗೈರು ಹಾಜರಾಗಿರುತ್ತಾರೆ.<br>ದಿನಾಂಕ:23.03.2021ರಂದು ನಡೆದ ದಾಖಲೆ ಪರಿಶೀಲನೆಗೆ ಗೈರು ಹಾಜರಾದ ಅಭ್ಯರ್ಥಿಗಳಿಗೆ ಮತ್ತೊಂದು ಅಂತಿಮ ಅವಕಾಶವನ್ನು ನೀಡಿ ದಿನಾಂಕ:12.04.2021ರೊಳಗಾಗಿ ದಾಖಲೆ ಪರಿಶೀಲನೆಗೆ ಹಾಜರಾಗಲು ಸೂಚಿಸಿ ಜ್ಞಾಪನವನ್ನು ನೀಡಲಾಗಿದೆ.<br>ಕ್ರಮ ಸಂಖ್ಯೆ:21ರ ಅಭ್ಯರ್ಥಿಯನ್ನು ಒಳಗೊಂಡಂತೆ, ಗೈರು ಹಾಜರಿಯಾದ ಎಲ್ಲಾ ಅಭ್ಯರ್ಥಿಗಳನ್ನು ತೆಗೆದು ಹಾಕಿ ಹೊಸ ಪರಿಷ್ಕೃತ ತಾತ್ಕಲಿಕ ಆಯ್ಕೆ ಪಟ್ಟಿಯನ್ನು ದಿನಾಂಕ:17.06.2021ರಲ್ಲಿ ಪ್ರಕಟಿಸಲಾಗಿದೆ.<br>ದಿನಾಂಕ:02.06.2021ರಂದು ದಾಖಲಾತಿ ಪರಿಶೀಲನೆ ನಡೆಸಿರುವುದಿಲ್ಲ. |
| ಆ) | ಸದರಿ ಅಭ್ಯರ್ಥಿಗಳು ಈ ಹಿಂದೆ ದೇಹದಾರ್ಢ್ಯ ಪರೀಕ್ಷೆಗೆ ಒಳಗಾದ ಸಂದರ್ಭದಲ್ಲಿ ವಿಡಿಯೋ ಚಿತ್ರೀಕರಣ ನಡೆಸಿದ್ದು, ತಾತ್ಕಾಲಿಕ ಆಯ್ಕೆ ಪಟ್ಟಿ ಕ್ರಮ ಸಂಖ್ಯೆ–21ರಲ್ಲಿನ ಅಭ್ಯರ್ಥಿಯ ಬದಲಿಗೆ ಬೇರೊಬ್ಬರು ದೇಹದಾರ್ಢ್ಯ ಪರೀಕ್ಷೆಗೆ ಹಾಜರಾಗಿದ್ದು, ಸದರಿ ತಾತ್ಕಾಲಿಕ ಆಯ್ಕೆ ಪಟ್ಟಿಯ ಅಭ್ಯರ್ಥಿ ಕ್ರಮ ಸಂಖ್ಯೆ 21 ರವರು ದಿನಾಂಕ:02.06.2021ರಂದು ದಾಖಲೆ ಪರಿಶೀಲನೆಗೆ ಹಾಜರಾಗಿದ್ದು, ಆ ಸಂದರ್ಭದಲ್ಲಿ ಈ ಹಿಂದೆ ದೇಹದಾರ್ಢ್ಯ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಯ ಬದಲಿಗೆ ಬೇರೊಬ್ಬ ನಕಲಿ ಅಭ್ಯರ್ಥಿ ಹಾಜರಾಗಿರುವುದು ಹಾಗೂ ಈ ಬಗ್ಗೆ ಚಿತ್ರೀಕರಣ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | |
| ಇ) | ಬಂದಿದ್ದಲ್ಲಿ, ದೇಹದಾರ್ಢ್ಯ ಪರೀಕ್ಷೆಗೆ ಹಾಜರಾದ ನಕಲಿ ಅಭ್ಯರ್ಥಿಯ ವಿರುದ್ಧ ಅಪರಾಧ ಮೊಕದ್ದಮೆ ದಾಖಲಿಸಲಾಗಿದೆಯೇ; ಅಪರಾಧ ಮೊಕದ್ದಮೆಯನ್ನು ದಾಖಲಿಸದಿದ್ದಲ್ಲಿ, ದಾಖಲಿಸದಿರಲು ಕಾರಣವೇನು; | |
| ಈ) | ದೇಹದಾರ್ಢ್ಯ ಪರೀಕ್ಷೆಗೆ ಮತ್ತು ದಾಖಲೆ ಪರಿಶೀಲನೆಗೆ ಹಾಜರಾದ ನಕಲಿ ಅಭ್ಯರ್ಥಿಗಳ ವಿರುದ್ಧ ಅಪರಾಧ ಮೊಕದ್ದಮೆ ಹೂಡುವ ಬಗ್ಗೆ ದಾಖಲೆ ಪರಿಶೀಲನಾ ಸಮಿತಿಯ ಅಧ್ಯಕ್ಷರು ಸಹಾಯಕ ಕಮಾಂಡೆಂಟ್ (ಅಡ್ಜುಟೆಂಟ್) 1ನೇ ಪಡೆ, ಕೆ.ಎಸ್.ಆರ್.ಪಿ, ಬೆಂಗಳೂರು ಮತ್ತು ಸಹಾಯಕ ಆಡಳಿತಾಧಿಕಾರಿಗಳು, 1ನೇ ಪಡೆ, ಕೆ.ಎಸ್.ಆರ್.ಪಿ ಬೆಂಗಳೂರು ರವರು ಮೇಲಾಧಿಕಾರಿಗಳಿಗೆ ವರದಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | 2021–22ನೇ ಸಾಲಿನಲ್ಲಿ ಇಂತಹ ಘಟನೆಗಳು 1ನೇ ಪಡೆ, ಕೆ.ಎಸ್.ಆರ್.ಪಿ, ಬೆಂಗಳೂರು ಆವರಣದಲ್ಲಿ ನಡೆದಿರುವುದಿಲ್ಲ ಮತ್ತು ಯಾವುದೇ ಅಪರಾಧ ಮೊಕದ್ದಮೆಯನ್ನು ಠಾಣೆಯಲ್ಲಿ ದಾಖಲಿಸಿರುವುದಿಲ್ಲ ಎಂದು ಸಂಬಂಧಿತ ಕೆ.ಎಸ್.ಆರ್.ಪಿ. ಕಮಾಂಡೆಂಟ್‌ರವರು ವರದಿ ಸಲ್ಲಿಸಿರುತ್ತಾರೆ. ಈ ಬಗ್ಗೆ ತನಿಖೆ ನಡೆಸಿ, ವರದಿ ಮಾಡುವಂತೆ ಡಿ.ಜಿ. ಮತ್ತು ಐ.ಜಿ.ಪಿ ರವರಿಗೆ ಸೂಚಿಸಲಾಗುವುದು. |
| ಉ) | ವರದಿ ನೀಡದಿದ್ದಲ್ಲಿ, ಸಮಿತಿಯ ಅಧ್ಯಕ್ಷರು ಮತ್ತು ಸಹಾಯಕ ಆಡಳಿತಾಧಿಕಾರಿಗಳ ವಿರುದ್ಧ ಹಾಗೂ ನಕಲಿ ಅಭ್ಯರ್ಥಿಗಳ ವಿರುದ್ಧ ಸರ್ಕಾರ ಕೂಡಲೇ ಅಪರಾಧ ಮೊಕದ್ದಮೆ ಹೂಡಿ ಮಾಹಿತಿಯನ್ನು ಮುಚ್ಚಿಟ್ಟ ಅಧಿಕಾರಿಗಳ ಮೇಲೆ ಶಿಸ್ತು ಕ್ರಮ ಕೈಗೊಳ್ಳುವುದೇ? | |

HD/55/PPS/2022

(ಆರಗ ಜ್ಞಾನೇಂದ್ರ)
ಮಾನ್ಯ ಗೃಹ ಸಚಿವರು